4. ಹಕ್ಕು ಚ್ಯುತಿ ನಿರ್ಣಯದ ಬಗ್ಗೆ ಶಾಸಕರು ಅಧ್ಯಯನ ಮಾಡಲು ವಿದೇಶಕ್ಕಾಗಿ ಪ್ರವಾಸ ಹೋಗಲು ಕೋರ್ಟ್ ತಡೆಯಾಜ್ಞೆ ನೀಡಿರುವುದು

ಶ್ರೀ ಕೆ.ಬಿ. ಮಲ್ಲಿಕಾರ್ಜುನ :- ಮಾನ್ಯ ಅಧ್ಯಕ್ಷರೇ, ನಾವು ಒಂದು ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ, ಅದಕ್ಕೆ ತಾವು ಡೇಟ್ ಮತ್ತು ಟೈಮ್ ಫಿಕ್ಸ್ ಮಾಡಿಲ್ಲ.

ಅಧ್ಯಕ್ಷರು :- ನಾನು ಈ ವಿಚಾರವಾಗಿ ನಿನ್ನೆ ಹೇಳಿದ್ದೇನೆ, ಈ ವಿಷಯವಾಗಿ ಉಚ್ಚ ನ್ಯಾಯಾಲಯದ ಜಡ್ಜ್‌ಮೆಂಟ್ ಕಾಪಿ ಇನ್ನು ನನಗೆ ಬಂದಿಲ್ಲ. ಇದು ಬಂದತಕ್ಷಣ ಇಲ್ಲೆ ಬೇಕಾದರೆ ನಾನು ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ ಅಥವಾ ಕಮಿಟಿಗೆ ನೇರವಾಗಿ ಕಳುಹಿಸುವಂತಹ ಪವರ್ ಅದರಲ್ಲಿ ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರುಗಳು ಚರ್ಚೆಯಾಗಬೇಕೆಂದು ಹೇಳುತ್ತಿದ್ದಾರೆ, ಅದುದರಿಂದ ಇದು ಚರ್ಚೆ ನಡೆಯಲ್ಲಿ ನಾವು ಜಡ್ಜ್‌ಮೆಂಟ್ ಮೇಲೆ ಚರ್ಚೆ ಮಾಡುವುದಿಲ್ಲ.

ಅಧ್ಯಕ್ಷರು :- ಅವರು ಕೊಟ್ಟ ರಿಪೋರ್ಟ್ ಮೇಲೆ, ನಂತರ ಚರ್ಚೆ ಮಾಡಬಹುದಲ್ಲಾ,

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೇ, ನಾವು ಆದೇಶದ ಮೇಲೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಇದುವರೆಗೂ ಏನು ನಡೆದಿದೆ ಅದರ ಬಗ್ಗೆ ಮಾತ್ರ ಚರ್ಚೆ ಮಾಡುತ್ತೇವೆ, ತಾವು ಸಮಯವನ್ನು ನಿಗದಿಪಡಿಸಿದರೆ ಮಾಡಬಹುದು.

ಅಧ್ಯಕ್ಷರು :- ನಾನು ಜಡ್ಜ್‌ಮೆಂಟ್ ಕಾಪಿಯನ್ನು ನೋಡಿ ಆಮೇಲೆ ಹೇಳುತ್ತೇನೆ. ನಾನು ಈ ವಿಷಯವನ್ನು ನಿನ್ನೆಯೂ ಹೇಳಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಏನು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದಾರೆ, ಇದನ್ನು ನಾನು ಗಮನಿಸಿರಿಸುವ ಪ್ರಕಾರ ಅದಕ್ಕೆ ಮತ್ತೆ ಹೈಕೋರ್ಟಿನ ತೀರ್ಪಿನ ಏನೂ ಸಂಬಂಧವಿಲ್ಲ, ಇವರ ಹೆಸರುಗಳನ್ನು ಅನಾವಶ್ಯಕವಾಗಿ, ವಿದೇಶಕ್ಕೆ ಹೋಗದೇ ಇರುವವರ ಹೆಸರುಗಳನ್ನು ಮೆನ್‌ಶನ್ ಮಾಡಿ ಅವರು ಅರ್ಜಿಯನ್ನು ಹಾಕಿದ್ದರು, ಅದು ವಜಾ ಆಗಿದೆ, ಈ ರೀತಿಯಾಗಿರುವುದು ಅರ್ಜಿದಾರರ ಪಾಡು, ಇಲ್ಲಿ ಕಾಸ್ಟ್ ಕಟ್ಟುವಂಥಾದ್ದು, ಈಗ ಅವರ ಹೆಸರುಗಳನ್ನು ಉಪಯೋಗಿಸಿಕೊಂಡಿರುವಂಥಾದ್ದು, ಇದು ತೀರ್ಪಿನಲ್ಲಿ ಏನೂ ಬರುವುದಿಲ್ಲ. ಈ ದೃಷ್ಟಿಯಿಂದ ಇಲ್ಲ ಶಾಸಕರಾಗಿ ಇವರು ವಿದೇಶಕ್ಕೆ ಹೋಗದಿದ್ದರೂ ಇವರ ಮಾನನಷ್ಟವಾಗಿದೆ, ಅದುದರಿಂದ ಇದು ಹಕ್ಕುಚ್ಯುತಿಯಾಗಿದೆ, ಅದುದರಿಂದ ಈ ವಿಷಯವನ್ನು ತೆಗೆದುಕೊಳ್ಳಬಹುದು. ಇದು ಕೋರ್ಟಿನ ತೀರ್ಪಿಗೂ ಮತ್ತೆ ಇದಕ್ಕೂ ಏನು ಸಂಬಂಧವಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೆ, ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ, ಉಚ್ಚ ನ್ಯಾಯಾಲಯದ ತೀರ್ಪಿನ ಬಗ್ಗೆ ನಾವು ಚರ್ಚಿಸುವುದಿಲ್ಲ, ತಾವು ಹಕ್ಕುಚ್ಯುತಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :- ನೋಡೋಣ, ಈಗ ಬಿ.ಎ.ಸಿ. ಮೀಟಿಂಗ್ ನಾಲ್ಕು ಗಂಟೆಗೆ ಇದೆ, ಅವರು ಚರ್ಚೆಯಾದರೂ ರೂಲಿಂಗ್ ಕೊಡುತ್ತೇವೆಂದು ರಿಸರ್ವ್ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಕೆ. ಜಯಪ್ರಕಾಶ್ ಹೆಗಡೆಯವರು ಹಾಗೂ ಮಾನ್ಯ ಕೆ.ಬಿ. ಮಲ್ಲಿಕಾರ್ಜುನರವರು ಏನು ಹಕ್ಕುಚ್ಯುತಿ ಸೂಚನೆಯನ್ನು ಕಳುಹಿಸಿದ್ದಾರೆ, ಇದರ ಬಗ್ಗೆ ಈಗಾಗಲೇ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿದೆ. ಅಲ್ಲಿ ಉತ್ತರವೂ ಸಹಿತ ಬಂದಿದೆ. ಇಲ್ಲಿ ಕೆಳಮನೆಗೆ ಸಂಬಂಧಪಟ್ಟಂತಹ ಶಾಸಕರುಗಳು, ನಾವು ಜನ ಸಂಪರ್ಕವನ್ನು ಇಟ್ಟುಕೊಂಡಿರುವಂಥವರು, ಪ್ರತಿನಿತ್ಯ ಜನಗಳ ಜೊತೆಯಲ್ಲಿರುವಂಥವರು, ನಾವು ವಿದೇಶ ಯಾತ್ರೆಯನ್ನು ಮಾಡಿದಿದ್ದರೆ, ಸರ್ಕಾರದ ಹಣವನ್ನು ವೆಚ್ಚ ಮಾಡಿದಿದ್ದರೆ, ಅದು ಸರಿಯಿರುತ್ತಿತ್ತು, ಇದರ ಬಗ್ಗೆ ಹೈಕೋರ್ಟ್ ಸಹಿತ ಕೂಡ ಅರ್ಜಿದಾರರಿಗೆ 5 ಸಾವಿರ ರೂಪಾಯಿಗಳ ದಂಡ ವಿಧಿಸಿ, ಶಿಕ್ಷೆಯನ್ನು ವಿಧಿಸಿರುವಂಥಾದ್ದು ಗೊತ್ತಿದೆ. ನಮ್ಮ ಶಾಸಕರ ವಾದವನ್ನು ಹೈಕೋರ್ಟ್ ಸಹ ಎತ್ತಿ ಹಿಡಿದಿದೆ. ಅದುದರಿಂದ ಈ ಪತ್ರಿಕಾ ವರದಿಗಳು ಏನು, ಈ ಹೈಕೋರ್ಟ್ ತೀರ್ಪನ್ನು ವರದಿ ಮಾಡಿವೆ, ಅದನ್ನು ಮತ್ತೊಮ್ಮೆ ಮಾನ್ಯ ಸುಬ್ಬಾರೆಡ್ಡಿಯವರಿಂದ ಅದನ್ನು ಹೈಕೋರ್ಟ್‌ನಿಂದ ತರಿಸಿಕೊಳ್ಳುವಂತಹ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ. ಇದು ನನ್ನ ಅಭಿಪ್ರಾಯವಾಗಿದೆ.

ಅಧ್ಯಕ್ಷರು :- ಮಾನ್ಯ ಸುಬ್ಬಾರೆಡ್ಡಿಯವರು, ಇನ್ನು ಅರ್ಧ ಗಂಟೆಯಲ್ಲಿ ತರಿಸಿಕೊಡುತ್ತೇನೆಂದು ನಿನ್ನೆ ಹೇಳಿದ್ದರು, ಇನ್ನೂ ಆ ಕಾಪಿ ತಂದು ಕೊಟ್ಟಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಇನ್ನು ಎರಡನೆಯದಾಗಿ ವಿಷಯವನ್ನು ಡೀವಿಯೇಟ್ ಮಾಡುವುದು ಬೇಡ, ಮಾನ್ಯ ಸುಬ್ಬಾರೆಡ್ಡಿಯವರು ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್ ಆಗಿದ್ದಾರೆ, ಅವರು ಬಹಳ ಒಳ್ಳೆಯ ಕೆಲಸಗಳನ್ನು ಈ ಅಸೋಸಿಯೇಷನ್‌ನಲ್ಲಿ ಮಾಡುತ್ತಿದ್ದಾರೆ, ಆದರೆ ಇಲ್ಲಿ ಅವರು ಶಾಸಕರಾಗಿ ಬಂದಿದ್ದಾರೆ. ಈಗ ನಾವು ಇಲ್ಲಿ ಚರ್ಚೆ ಮಾಡಬೇಕಾಗಿರುವಂಥಾದ್ದು ಶಾಸಕರ ಮರ್ಯಾದೆ ಮತ್ತು ಗೌರವದ ಪ್ರಶ್ನೆ, ಅದು ಯಾರೇ ಇರಲಿ, ಅದು ಮಾನ್ಯ ಜಯಪ್ರಕಾಶ್ ಹೆಗಡೆಯವರಾಗಲಿ, ಮಾನ್ಯ ಮಲ್ಲಿಕಾರ್ಜುನರವರಾಗಲಿ ಅಲ್ಲ ಯಾರೇ ಆಗಿರಲಿ, ಇಲ್ಲಿ ಸದನದ ಆ ಕಡೆ ಇರುವಂತಹ ಸದಸ್ಯರುಗಳು ಕೇಳಿದಾಗ, ಇಲ್ಲಿ ಮಾನ್ಯ ಅಧ್ಯಕ್ಷರಲ್ಲಿ ನನ್ನ ಮನವಿ ಏನೆಂದರೆ ಈ ರೀತಿಯ ವಿಚಾರಗಳು ಪ್ರಸ್ತಾಪವಾದಾಗ ಅದಕ್ಕೆ ತತ್‌ತಕ್ಷಣ ಆದ್ಯತೆಯನ್ನು ಕೊಡಬೇಕು. ತಾವು ಇವತ್ತು ಬಿ.ಎ.ಸಿ. ಮೀಟಿಂಗ್‌ನಲ್ಲಿ ಇದನ್ನು ಚರ್ಚೆ ಮಾಡೋಣವೆಂದು ಹೇಳಿದ್ದೀರಿ, ಇವತ್ತು ನಾವು ನಾಲ್ಕು ಗಂಟೆಗೆ ಸಭೆ ಸೇರಿದಾಗ, ತಾವು ದಯಮಾಡಿ ಒಂದು ಟೈಮ್ ಫಿಕ್ಸ್ ಮಾಡಿ, ಅವರಿಗೆ ನಾಳೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :- ಮಾಡೋಣ, ಬಿ.ಎ.ಸಿ. ಮೀಟಿಂಗ್ ನಾಲ್ಕು ಗಂಟೆಗೆ ಇದೆಯಲ್ಲಾ ಟೈಮ್ ಫಿಕ್ಸ್ ಮಾಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೆ, ಈ ಜಡ್ಜ್‌ಮೆಂಟ್ ಕಾಪಿ ತಕ್ಷಣವೇ ಸಿಗುವುದಿಲ್ಲ. ದಿನಗಟ್ಟಲೆಯಾಗುತ್ತದೆ, ಅದಕ್ಕೋಸ್ಕರ ನಾವು ಕಾಯುತ್ತಾ ಕುಳಿತರೆ ಆಗುವುದಿಲ್ಲ. ಇದರ ಬಗ್ಗೆ ಚರ್ಚೆ ಆಗುವುದಿಲ್ಲ, ಅದುದರಿಂದ ತಾವು ದಯವಿಟ್ಟು ಸಮಯವನ್ನು ನಿಗದಿ ಪಡಿಸಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :- ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರವನ್ನು ನಿನ್ನೆಯ ದಿವಸ ಭೋಜನದ ಸಮಯದಲ್ಲಿ ಮುಖ್ಯ ನ್ಯಾಯಾಧೀಶರಿಗೆ ಇದನ್ನು ಮೆನ್‌ಶನ್ ಮಾಡಿದಾಗ, ಅವರು ನಿಮ್ಮ ಡಿಸ್‌ಕಶನ್‌ಗೂ ನನ್ನ ಜಡ್ಜ್‌ಮೆಂಟ್‌ಗೂ ಏನೂ ಸಂಬಂಧವಿಲ್ಲ, ಆದರೂ ಸಹಿತ ಇದರ ಕಾಪಿಯನ್ನು ಕೊಡಿಸುತ್ತೇನೆಂದು ಹೇಳಿದರು, ನಾನು ಜೆರಾಕ್ಸ್ ಕಾಪಿಯನ್ನು ಅರ್ಜೆಂಟ್

ಆಗಿ ಕೊಡಿ ಎಂದು ಕೇಳಿದ್ದೇನೆ. ಅವರು ಕಾರ್ಬನ್ ಕಾಪಿಯನ್ನು ಪ್ರೆಸ್‌ನವರಿಗೆ ಅರ್ಜಿಂಟಾಗಿ ಬೇಕೆಂದರೆ ಕೊಡುತ್ತಾರೆ, ಅದನ್ನಾದರೂ ಕೊಡಿಸಿ ಎಂದು ಹೇಳಿದ್ದೇನೆ. ಅವರು ನಿನ್ನೆಯೇ ಆರ್ಡರ್ ರೆಡಿ ಮಾಡಿರುತ್ತಾರೆ, ನಾನೇ ಅಲ್ಲಿಗೆ ಹೋಗಿಲ್ಲ. ಆದುದರಿಂದ ಇದಕ್ಕೂ, ಇಲ್ಲಿ ಪ್ರಸ್ತಾಪ ಮಾಡುವಂತಹ ವಿಚಾರಕ್ಕೂ ಸಂಬಂಧವಿಲ್ಲ. ತಾವು ದಯವಿಟ್ಟು ಹಕ್ಕು ಚ್ಯುತಿ ನಿರ್ಣಯಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. Speaker :- Certain rules have to be followed.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೆ, ಇವತ್ತಿನ ಕಾರ್ಯಾಕಲಾಪಗಳ ಪಟ್ಟಿಯಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡಬೇಕೆಂದು ತಾವು ಸೂಚನೆಯನ್ನು ಕೊಟ್ಟಿದ್ದೀರಿ. ಈಗ ನಮ್ಮ ಮನವಿ ಏನೆಂದರೆ ಸಿ.ಇ.ಟಿ.ಯ ವಿಚಾರವಾಗಿ ನಿನ್ನೆ ಮಾನ್ಯ ಸೋಮಶೇಖರ್‌ರವರು ಭಾಷಣವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ, ಮತ್ತೊಂದು ವಿಚಾರವೇನೆಂದರೆ ಮಾನ್ಯ ಉನ್ನತ ಶಿಕ್ಷಣ ಸಚಿವರು ನಾಳೆ ಬೆಳಿಗ್ಗೆ 9.30 ಗಂಟೆಗೆ ಎಲ್ಲಾ ವಿರೋಧ ಪಕ್ಷದ ಮುಖಂಡರುಗಳನ್ನು ಸಭೆಗೆ ಕರೆದಿದ್ದಾರೆ, ಆದುದರಿಂದ ಇವತ್ತು ಈ ಚರ್ಚೆ ಮುಗಿಯಬೇಕು, ವಿಧಾನಪರಿಷತ್ತಿನಲ್ಲಿ ಇದು ಆಗಿದೆ, ತಾವು ಇದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು :- ಆಯಿತು, ನೀವು ಇವತ್ತು ಈ ಚರ್ಚೆಯನ್ನು ಮುಗಿಸುವುದಾದರೆ we will take up CET.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ಆಶ್ಚರ್ಯಕರವಾಗಿ ಕಾಣುತ್ತಿದೆ, ನಾನು ತಮ್ಮ ಗಮನಕ್ಕೆ ತರುವಂಥಾದ್ದು ಈ ಸದನದ ಒಂದು ವ್ಯವಸ್ಥೆ ಏನಿದೆ, ನಾನು ನಿನ್ನೆ ದಿವಸ ಮಾತನಾಡಿ ವಿಷಯವನ್ನು ಅರ್ಧಕ್ಕೆ ನಿಲ್ಲಿಸಿದ್ದೇನೆ. ನಿನ್ನೆ ದಿವಸ ಕಾರ್ಯಕಲಾಪಗಳ ಪಟ್ಟಿಯಲ್ಲಿ ಮೊದಲು ರಾಜ್ಯಪಾಲರ ಭಾಷಣವಿರಲಿಲ್ಲ. ಮೊದಲು ನಿಯಮ 69ನ್ನು ಮೊದಲು ಕೊಡಲಾಗಿತ್ತು, ಮತ್ತೆ ಅದೇ ವಿಷಯ ಮೊದಲು ಪ್ರತಿಬಿಂಬಿಸಬೇಕಾಗಿತ್ತು, ಆದರೆ ಇವತ್ತು ಮೊದಲು ರಾಜ್ಯಪಾಲರ ಭಾಷಣವನ್ನು ಮೊದಲು ಕೊಡಲಾಗಿದೆ, ಇಲ್ಲಿ ಬಹಳ ವ್ಯತ್ಯಾಸ ಕಾಣುತ್ತಿದೆ, ಇದು ಡಿಫರೆಂಟಾಗಿ ಕಾಣುತ್ತಿದೆ.

ಅಧ್ಯಕ್ಷರು :- ಡಿಫರೆಂಟ್ ಏನೂ ಇಲ್ಲ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಕ್ಷಮಿಸಬೇಕು, ನಾನು ಮಾತನಾಡುವುದನ್ನು ಮಧ್ಯದಲ್ಲಿ ನಿಲ್ಲಿಸಿದ್ದೇನೆ, ಇದನ್ನು ಕಂಟಿನ್ಯೂ ಮಾಡಬೇಕಾಗಿತ್ತು.

ಅಧ್ಯಕ್ಷರು :- ಹಾಗಿದ್ದರೆ ಕೇಳಿ, ಇಲ್ಲಿ ಎಲ್ಲರೂ 60-70 ಜನರು ಒಂದು ಸಬ್ಜೆಕ್ಟ್ ಮೇಲೆ ಮಾತನಾಡುತ್ತಾರೆ, ಮೇಲ್ಮನೆಯಲ್ಲಿ ಏಕೆ ಬೇಗಬೇಗ ವಿಷಯಗಳು ಮುಗಿಯುತ್ತಿದೆ? ಇಲ್ಲಿ ಒಂದೊಂದು ಪಾರ್ಟಿಯಲ್ಲೂ 12 ಜನರು ಮಾತನಾಡಬೇಕು, That is the difficulty here. ಅಲ್ಲಿ ಇಬ್ಬರು ಮಾತನಾಡಿ ಮುಗಿಸುತ್ತಾರೆ, ನೀವು ಪಾರ್ಟಿಗಳು ಸೆಲೆಕ್ಟ್ ಮಾಡಿಕೊಳ್ಳುವುದಿಲ್ಲ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಚರ್ಚೆ ಪ್ರಾರಂಭವಾಗಲಿಲ್ಲವೆಂದರೆ ಅದು ಬೇರೆ, ಆದರೆ ನಿನ್ನೆ ನಾನು ಚರ್ಚೆ ಪ್ರಾರಂಭ ಮಾಡಿ ಅರ್ಧಕ್ಕೇ ನಿಲ್ಲಿಸಿದ್ದೇನೆ.

ಅಧ್ಯಕ್ಷರು :- ಮಾನ್ಯ ಸೋಮಶೇಖರ್‌ರವರೇ, ಚರ್ಚೆ ಪ್ರಾರಂಭವಾಗಿ ಕೂಡ ಅದನ್ನು ಮುಂದಕ್ಕೆ ಹಾಕಿರುವಂತಹ ಉದಾಹರಣೆಯನ್ನು ತಮಗೆ ಬೇಕಾದರೆ ಹೇಳುತ್ತೇನೆ.

Please come to my chambers, I will tell. There are hundreds of examples. I will show you.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ಹೊಸ ಹೊಸ ಸಂಪ್ರದಾಯಗಳನ್ನು ಆಗುತ್ತಿದೆ.

ಡಾ|| ಜಿ. ಪರಮೇಶ್ವರ್ :- ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ರೂಲ್ಸ್ 68ಯ ಅಡಿಯಲ್ಲಿ ಏನು ಸಿ.ಇ.ಟಿಯ ಬಗ್ಗೆ ಚರ್ಚೆಯಾಗುತ್ತಿತ್ತು. ಅದನ್ನು ಮಧ್ಯದಲ್ಲಿ ನಿಲ್ಲಿಸಿ, ಈಗ ನಾಳೆ ದಿವಸ ಎರಡು ಸದನದ ಗೌರವಾನ್ವಿತ ವಿರೋಧಪಕ್ಷದ ನಾಯಕರುಗಳನ್ನು ಸಭೆಗೆ ಕರೆದಿದ್ದೇವೆ. ಆ ಸಭೆಯಲ್ಲಿ ತೀರ್ಮಾನವಾದ ಮೇಲೆ ಈ ಚರ್ಚೆಯನ್ನು ಮತ್ತೆ ಮುಂದುವರೆಸುವುದು ಎಂದು ತೀರ್ಮಾನವಾಗಿದ್ದು, ಆನಂತರ ತಾವು ಇದನ್ನು ಮುಂದುವರೆಸಬಹುದು, ಅದಕ್ಕೆ ಏನೂ ಅಭ್ಯಂತರವಿಲ್ಲ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಸದನ ನಡೆಯುತ್ತಿರುವಾಗ ವಿಷಯ ಸದನದಲ್ಲಿ ಚರ್ಚೆಯಾಗುವುದು ಮುಖ್ಯವೊ, ಅಥವಾ ಸದನದ ಹೊರಗಡೆ ಆಗುವಂತಹ ಸಭೆಗಳು ಮುಖ್ಯವೊ? ಇದು ಚರ್ಚೆ ಮಧ್ಯೆ ನಡೆಯುತ್ತಿದೆ, ನಾವು ಅರ್ಧದಲ್ಲಿ ನಿಲ್ಲಿಸಿದ್ದೇವೆ,

ಅಧ್ಯಕ್ಷರು :- ನನಗೆ ಮೇಲ್ಮನೆಯಲ್ಲಿ ಏನು ತೀರ್ಮಾನ ಮಾಡಿದ್ದಾರೋ, ಅದಕ್ಕೂ ನಮಗೂ ಸಂಬಂಧವಿಲ್ಲ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ನಾವು ಮೇಲ್ಮನೆಯ ವಿಚಾರವನ್ನು ಕೇಳುತ್ತಾ ಇಲ್ಲ, ಈ ಸರ್ಕಾರ ಔಟ್ ಸೈಡ್ ದಿ ಹೌಸ್‌ನಲ್ಲಿ ಏನು ಚರ್ಚೆ ಮಾಡುತ್ತಿದ್ದಾರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು. ಸದನದಲ್ಲಿ ಏನು ಚರ್ಚೆ ಪ್ರಾರಂಭವಾಗಿದೆ. ಅದು ಅರ್ಧಕ್ಕೆ ನಿಂತಿದೆ, ಅದನ್ನು ಮುಂದುವರೆಸಬೇಕು.

ಅಧ್ಯಕ್ಷರು :- ಆಯಿತು, ಇವತ್ತು ಸಿ.ಇ.ಟಿ.ಯ ಬಗ್ಗೆ ಚರ್ಚೆ ಮುಗಿಯಬೇಕು, We have to close the CET subject. on that condition, I allow.

ಶ್ರೀ ಬಿ. ಸೋಮಶೇಖರ್ :- ತಾವು ರಾಜ್ಯಪಾಲರ ಭಾಷಣಕ್ಕಿಂತ ಮೊದಲು ಈ ಸಿ.ಇ.ಟಿ ಚರ್ಚೆಗೆ ಮೊದಲು ಅವಕಾಶವನ್ನು ಕೊಡಬೇಕು, ಏಕೆಂದರೆ ನಾನು ಚರ್ಚೆಯನ್ನು ಅರ್ಧಕ್ಕೆ ನಿಲ್ಲಿಸಿದ್ದೇನೆ.

ಅಧ್ಯಕ್ಷರು :- ಆಯಿತು, ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

5. ನಿಯಮ 69ರ ಮೇರೆಗೆ ಸಿ.ಇ.ಟಿ. ಬಗ್ಗೆ (ಮುಂದುವರಿದ ಚರ್ಚೆ)

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಸಭಾಧ್ಯಕ್ಷರೆ, ನಿನ್ನೆಯ ದಿವಸ ಈ ಸಿಇಟಿ ಯ ಬಗ್ಗೆ ಚರ್ಚೆ ಅರ್ಧಕ್ಕೆ ನಿಂತಿತ್ತು. ಮುಂದುವರೆದ ಚರ್ಚೆಯನ್ನು ಊಟದ ವಿರಾಮದ ನಂತರ ಪ್ರಾರಂಭ ಮಾಡೋಣವೆಂದರೆ ಹಾಗೆಯೇ ಮಾಡೋಣ.

ಅಧ್ಯಕ್ಷರು :- ಇಲ್ಲಿ ಏನಾಗಿದೆ ಎಂದರೆ, ಎರಡೂವರೆ ಗಂಟೆಗೆ ಸೇರೋಣವೆಂದರೆ, ಮೂರು ಗಂಟೆಯವರೆಗೆ ಬಿಲ್ ಹಾಕಿದರು ಯಾರೂ ಬರುವುದಿಲ್ಲ, ನಿನ್ನೆ ಕ್ರಿಕೆಟ್‌ಗೋಸ್ಕರ ಹಾಗೆ ಆಯಿತೇನೋ ಗೊತ್ತಾಗಲಿಲ್ಲ. ದಯವಿಟ್ಟು ಮಾನ್ಯ ಸದಸ್ಯರು, ಏಕೆ ಎರಡೂವರೆಗೆ